

ಇಷ್ಟವಾದದ್ದು ಸಿಕ್ಕಿದರೆ ಅದರ ಇತರ ಬಣ್ಣಗಳನ್ನು ತೋರಿಸು ಅಂತ ಹೇಳೋದು ಸುಲಭ ಅಷ್ಟೆ'. ಇದು ನನ್ನವಳ ವಿವರಣೆ.

ನನಗೆ ಜ್ಞಾನೋದಯವಾದ ಹಾಗೆ, 'ಹಾಗಾದರೆ ಆ ಐದಾರು ಸೀರೆ ನೋಡಿದ ಮೇಲೆ ನಿನಗೆ ಬೇಕಾದ ಸೀರೆ ಸಿಕ್ಕುತ್ತೆ ಅಂದ ಹಾಗೆ ಆಯಿತು' ಎಂದೆ.

ಮೌಖಿಕ ಪರೀಕ್ಷೆಯಲ್ಲಿ ಮುಗ್ಗರಿಸಿದವನಿಗೆ ಪರೀಕ್ಷಕ ಹೇಳುವಂತೆ, 'ಅದಕ್ಕೇ ಹೇಳೋದು, ನಿಮಗೆ ಸೀರೆ ಬಗ್ಗೆ ಏನೂ ಗೊತ್ತಿಲ್ಲ ಅಂತ. ಬರಿ ಡಿಸೈನು, ಬಣ್ಣ ಆದ್ರೆ ಆಯ್ತಾ?' ಎಂದಳು.

'... ಮತ್ತೆ?'

'ಅಂಚು, ಪಲ್ಲೂ, ಬುಟ್ಟ ಎಲ್ಲ ನೋಡಬೇಕಾಗುತ್ತೆ. ಅದೇನೋ ಪರ್ಮುಟೇಶನ್ ಕಾಂಬಿನೇಶನ್ ಅಂತ ನೀವು ಹೇಳ್ತೀರಲ್ಲ, ಅದನ್ನು ಮನಸ್ಸಿನಲ್ಲೇ ಲೆಕ್ಕ ಹಾಕಿಕೊಂಡು ಜ್ಞಾಪಕ ಇಟ್ಟುಕೊಳ್ಳಬೇಕಾಗುತ್ತೆ.' ಸೀರೆ ಆರಿಸುವ ಕಲೆಯ ಪದವಿ ತರಗತಿಯ ಪಾಠ ಮೂಡಿಬಂದಿತ್ತು.

'ಇನ್ನೇನಾದರೂ ಇದೆಯಾ...?' ಕಲಿಯಲು ಕಾತುರನಾದ ವಿದ್ಯಾರ್ಥಿಯ ವಿಧೇಯತೆ ತೋರಿದೆ.

'ಹೂಂ, ಇಲ್ದೇ ಏನು! ಇನ್ಯಾರಾದರೂ ನಾವು ನೋಡಿ ಪರವಾಗಿಲ್ಲ ಅಂತ ಅಲ್ಲೇ ಬಿಟ್ಟಿರುವ ಸೀರೇನ, ಆ ಸೀರೆ ತೋರಿಸಿ ಅಂತ ಕೇಳಿದರೆ, ತಕ್ಷಣ, ಅದನ್ನು ನಾನು ಆರಿಸಿದ್ದೇನೆ, ಸ್ವಲ್ಪ ಪಕ್ಕಕ್ಕೆ ಇಡಿ ಅಂತ ಎಚ್ಚರಿಕೆ ಕೊಡಬೇಕಾಗುತ್ತೆ. ಹಾಗೆ ನಮಗೆ ಬೇಕಾಗಿರುವ ಸೀರೆ ಇನ್ಯಾರಾದರೂ ನೋಡ್ತಾ ಇದ್ದರೆ ಆ ಸೀರೆಯ ಬಣ್ಣವೋ ಅಂಚೋ, ಈಗ ಇದು ಔಟ್ ಆಫ್ ಫ್ಯಾಷನ್ ಅಲ್ವಾ ಅಂತ, ಅವರಿಗೆ ಕೇಳುವ ಹಾಗೆ ಹೇಳ್ಕೋಬೇಕು. ಅವರು ಅದನ್ನು ಪಕ್ಕಕ್ಕೆ ಹಾಕಿದ ಮೇಲೆ ನಾವು ಅದನ್ನು ಆರಿಸಿ ತೆಗೆದು ಇಟ್ಟುಕೋಬಹುದು.'

'ಅಯ್ಯೋ ರಾಮ..., ಆಮೇಲೆ...'

'ಆಮೇಲೇನು, ಒಂದು ಹತ್ತು–ಹನ್ನೆರಡು ಸೀರೆ ಆರಿಸಿಕೊಂಡು, ಅವನ್ನು ಪರಿಶೀಲಿಸಿ, ಅಳೆದು ಸುರಿದು ಮಾಡಿ, ಆ ತರಹದ ಸೀರೆ ನನಗೆ ಗೊತ್ತಿರುವ ಯಾರ ಬಳಿಯಲ್ಲಾದರೂ ಇದೆಯಾ ಅಂತ ಜ್ಞಾಪಿಸಿಕೊಳ್ಳಬೇಕು. ಆಮೇಲೆ ಮೂರ್ನಾಲ್ಕು ಸೀರೆ ಇಟ್ಟುಕೊಂಡು ಅಂಗಡಿಯವನ ಹತ್ತಿರ, ಎಷ್ಟಪ್ಪ? ಅಂತ ಕೇಳಿ, ಚೌಕಾಸಿ ಮಾಡಿ, ಕೊನೆಗೆ ನಮಗೆ ಬೇಕಾದ ಸೀರೆ ಕೊಂಡುಕೊಳ್ಳಬೇಕು.' ಹೀಗೆ ಸೀರೆ ಆರಿಸುವ ಕಲೆಯ ಸ್ನಾತಕೋತ್ತರ ತರಗತಿಯ ಪಾಠವೂ ಆಗಿತ್ತು.

ತಜ್ಞೆಯಿಂದ ಇಷ್ಟೆಲ್ಲಾ ಪಾಠಗಳು ಆದ ಮೇಲೆ, ಸೀರೆ ಆರಿಸುವ ಸೂಕ್ಷ್ಮಗಳು ಸಂಪೂರ್ಣವಾಗಿ ಕರಗತವಾಗಿದೆ ಅನ್ನಿಸಿತು. ಜೊತೆಗೆ ಸೀರೆ ಆರಿಸುವುದು ಯಾವ ಬ್ರಹ್ಮವಿದ್ಯೆ ಅನ್ನಿಸಿ, ಅದನ್ನು ಕಾರ್ಯರೂಪಕ್ಕೆ ತರಲೇಬೇಕೆಂಬ ಉತ್ಕಟವಾದ ಆಸೆ ಉಂಟಾಯಿತು. ಈ ಬಾರಿ ಯುಗಾದಿಗೆ ನಾನೇ ಹೋಗಿ ಅವಳಿಗೆ ಒಳ್ಳೆಯ ಸೀರೆ ಆರಿಸಿ ಕೊಂಡುತಂದು, ಅವಳಿಗೆ ಸರ್‌ಪ್ರೈಸ್ ಮಾಡಬೇಕು ಅಂತ ತೀರ್ಮಾನಿಸಿದೆ.

ಪರಿಚಯದ ಸೀರೆ ಅಂಗಡಿಗೆ ಒಬ್ಬನೇ ಹೋದೆ. ಮಾಲೀಕರು 'ಬನ್ನಿ ಸರ್, ಮನೆಯವರು ಎಲ್ಲಿ?' ಎಂದು ಬಾಗಿಲ ಕಡೆ ನೋಡಿದರು. ನಾನು ಒಬ್ಬನೇ ಬಂದಿರುವುದನ್ನು ತಿಳಿಸಿದ ಮೇಲೆ, 'ಫೋನ್ ಮಾಡ್ತಾರಾ? ಇಲ್ಲ ಪಂಚೆ, ಶರ್ಟ್ ಪೀಸ್ ಏನಾದರೂ ಬೇಕಿತ್ತಾ?' ಅಂತ ವಿಚಾರಿಸಿದರು.

'ಇಲ್ಲ, ನಾನೇ ಸೀರೆ ತೆಗೆದುಕೊಂಡು ಹೋಗಲು ಬಂದಿದ್ದೇನೆ.' ಎಂದಾಗ, ಆಶ್ಚರ್ಯದಿಂದ ನನ್ನನ್ನು ನೋಡಿ, 'ಒಳ್ಳೆಯದಾಯಿತು ಸಾರ್. ಯಾವ ತರಹ ತೋರಿಸಲಿ? ಯಾರಿಗೆ ಕೊಡಕ್ಕೆ ಅಂತ ಹೇಳಿದರೆ ಸರಿಯಾದ ಒಳ್ಳೆಯ ಸೀರೆ ತೋರಿಸ್ತೀನಿ.' ಎಂದರು.

'ನಮ್ಮ ಮನೆಯವರಿಗೇ, ಹಬ್ಬಕ್ಕೆ ನಿಮ್ಮ ಅಂಗಡಿ ಸೀರೆ ಕೊಟ್ಟು ಆಶ್ಚರ್ಯಪಡಿಸೋಣ ಅಂತ' ಎಂದೆ.

'ಓ... ನೀವು ಬಹಳ ಬುದ್ಧಿವಂತರು ಸಾರ್. ಎಲ್ಲಾ ಗಂಡಂದಿರು ಹೀಗೆ ಇದ್ದರೆ ಎಷ್ಟು ಚೆನ್ನಾಗಿರ್ತಿತ್ತು. ಕೂತ್ಕೊಳ್ಳಿ ಸಾರ್. ನಿಮಗೆ ಯಾವ ಕಲರ್‌ನಲ್ಲಿ ತೋರಿಸಲಿ?' ಂದು ಅಂಗಡಿಯ ಮಾಲೀಕರು ನನ್ನನ್ನು ಉಬ್ಬಿಸಿದರು.

ನನಗೆ ತಕ್ಷಣ ಹೊಳೆದ ಮೊದಲ ಅಸ್ತ್ರ ಪ್ರಯೋಗಿಸಿದೆ – 'ಒಂಥರಾ ಪಿಂಕ್ ಸೀರೆ ತೋರಿಸಿ' ಎಂದೆ.

ಸೀರೆಗಳ ರಾಶಿ ನನ್ನ ಮುಂದೆ ಬಂದು ಬೀಳುತ್ತವೆ ಎಂದು ನಿರೀಕ್ಷಿಸಿದೆ. ಅಂಗಡಿಯಾತ ಅವನ ಸಹಾಯಕ ಇಬ್ಬರೂ ಪರಸ್ಪರ ಮುಖ ನೋಡಿಕೊಂಡು, ನನ್ನ ಕಡೆ ನೋಡಿದರು. ಸಹಾಯಕ 'ಯಾವ ಥರ ಪಿಂಕ್ ಸಾರ್...?' ಎಂದು ನನ್ನ ನಿರೀಕ್ಷೆಗೆ ತಣ್ಣೀರು ಎರಚಿದ.

ಅಂಗಡಿಯಾತ 'ನಿನ್ನೆ ಸ್ಪೆಷಲ್ ಸೀರೆಗಳನ್ನು ಕಟ್ಟಿ ಒಳಗೆ ಇಟ್ಟಿವಲ್ಲ, ಅದನ್ನು ತಗೊಂಡು ಬಾ...' ಎಂದರು.

ಅವರ ಸಹಾಯಕ, 'ಯಾವುದು, ವಾಪಸ್ ಕಳಿಸೋಕೆ ಕಟ್ಟಿದ್ದೆವಲ್ಲ, ಅದಾ...?' ಅಂತ ಕೇಳಿದ.

ಅದರಿಂದ ತಕ್ಷಣಕ್ಕೆ ಅವರು ತಬ್ಬಿಬ್ಬಾದರು. ಆದರೂ ತೋರಿಸಿಕೊಳ್ಳದೆ, 'ಏ... ಅದಲ್ಲವೋ... ಅದರ ಪಕ್ಕದಲ್ಲಿ ಎರಡು ಕಪ್ಪು ಸೀರೆ ಜೊತೆಗೆ ಕಟ್ಟಿಟ್ಟಿದೀವಲ್ಲ, ಸ್ಪೆಷಲ್ಲಾಗಿ ನೇಯಿಸಿದ್ದು. ಅದು...' ಅಂದರು.

ಆ ಹುಡುಗ 'ಓ... ಸರಿ, ಸರಿ...' ಅಂತ ಒಳಗಿನಿಂದ ಎಂಟು ಹತ್ತು ಸೀರೆಗಳಿದ್ದ ಒಂದು ಕಟ್ಟು ತಂದು ಬಿಚ್ಚಿದ. ಮಾಲಿಕರು ಅದರಿಂದ ಒಂದು ಸೀರೆ ತೆಗೆದು ಬಿಚ್ಚಿ ತೋರಿಸಿ, 'ನೋಡಿ ಅಂಜೂರಿ ಕಲರ್ ಸೀರೆ, ಬಹಳ ಚೆನ್ನಾಗಿದೆ. ಹಿಂದೆ ಒಂದು ಸಲಿ ನಿಮ್ಮ ಮನೆಯವರು ಈ ಕಲರ್ ತುಂಬಾ ಇಷ್ಟಪಟ್ಟಿದ್ದರು. ಆದರೆ ಬೇರೆ ಯಾರೋ ಅದನ್ನು ಆರಿಸಿಕೊಂಡು ಬಿಟ್ಟಿದ್ದರು. ತೊಗೊಂಡು ಹೋಗಿ, ಅವರಿಗೂ ಸಂತೋಷ ಆಗುತ್ತೆ' ಎಂದರು.

'ಅಲ್ಲ, ಅಂಜೂರಿ ಕಲರ್ ಅಂದರೆ...?' ನನ್ನ ಪ್ರಶ್ನೆ.

'ಅದೇ ಸಾರ್, ಅಂಜೂರದ ಹಣ್ಣಿನ ಬಣ್ಣ... ನೋಡಿ' ಅಂತ ಕೈ ಮೇಲೆ ಸೀರೆಯನ್ನು ಹೊದ್ದುಕೊಂಡು, ಮೇಲೆ ಎತ್ತಿ ತೋರಿಸಿದರು.

'ಒಣ ಅಂಜೂರ ಆದರೆ ಕಂದುಬಣ್ಣ ಇರುತ್ತಲ್ವಾ? ಇನ್ನು ಹಣ್ಣಾದ್ರೆ ಹಸಿರು ಬಣ್ಣದ ಜೊತೆ ತುದಿಯಲ್ಲಿ ಕೆಂಪು, ಕಂದುಬಣ್ಣ ಇರುತ್ತೆ...' ಅಂತ ಸೀರೆ ಕಡೆ ನೋಡಿದೆ.

ಅವರು ನಗುತ್ತಾ, 'ಅದಲ್ಲ ಸಾರ್. ಒಳ್ಳೆ ಅಂಜೂರದ ಹಣ್ಣು ಬಿಡಿಸಿದರೆ ಒಳಗೆ ಕಾಣುತ್ತಲ್ಲ ಆ ಬಣ್ಣದ ಸೀರೆ ಇದು. ಪಾಪ ನಿಮಗೆ ಇದೆಲ್ಲ ಹೊಸದು' ಎಂದು ನನ್ನ ಮೇಲೆ ಕನಿಕರ ತೋರಿಸಿದರು.

'ನೋಡಿ ಸಾರ್, ಈ ಸೀರೆ ತೆಗೆದುಕೊಂಡು ಹೋಗಿ. ನೂರಕ್ಕೆ ತೊಂಬತ್ತು ಭಾಗ ಅವರು ಎಕ್ಸ್‌ಚೇಂಜ್‌ಗೆ ಬಂದೇ ಬರ್ತಾರೆ. ಆಗ ಅವರಿಗೆ ಬೇಕಾದ್ದು ಆರಿಸಿಕೊಳ್ಳಲಿ. ನೀವು ಸರ್‌ಪ್ರೈಸ್ ಕೊಟ್ಟ ಹಾಗೂ ಆಯಿತು. ಅವರಿಗೆ ಬೇಕಾದ ಸೀರೆಯೂ ಸಿಕ್ಕು' ಎಂದು, ನನ್ನ ಉತ್ತರಕ್ಕೂ ಕಾಯದೆ, ಅಂಗಡಿಯ ಸಹಾಯಕನಿಗೆ 'ಲೋ... ಒಳ್ಳೆ ಗಿಫ್ಟ್ ಪ್ಯಾಕ್ ಮಾಡೋ. ಹಾಗೇ ಒಂದು ಡೈರಿ, ಕ್ಯಾಲೆಂಡರ್ ಎರಡೂ ದೊಡ್ಡ ಬಟ್ಟೆ ಚೀಲಕ್ಕೆ ಹಾಕಿಕೊಡು' ಅಂತ ಅಂಜೂರಿ ಸೀರೆ ಅವನಿಗೆ ಕೊಟ್ಟರು.

ಪ್ರತಿಕ್ರಿಯಿಸಿ: feedback@sudha.co.in